INDGN/SE/2024-25/59

October 30, 2024

| | |
|---|---|
| BSE Limited,<br>Phiroze Jeejeebhoy Towers,<br>Dalal Street,<br>Mumbai- 400001, India.<br>Scrip Code: 544172 | National Stock Exchange of India Limited<br>Exchange Plaza, C-1, Block G,<br>Bandra Kurla Complex, Bandra (E),<br>Mumbai - 400 051, India.<br>Trading symbol: INDGN |

Dear Sir / Madam,

**Sub: Newspaper Advertisement-Financial Results for quarter ended September 30, 2024**

Pursuant to Regulation 47 of SEBI (Listing Obligations and Disclosure Requirements) Regulations, 2015, please find enclosed copies of the newspaper advertisement published in Financial Express (English) and Vishwavani (Kannada) today, relating to financial results for quarter ended September 30, 2024.

This will also be posted on the company's website.
https://www.indegene.com/

This is for your information and records.

**For Indegene Limited**
**(Formerly known as Indegene Private Limited)**

Srishti Ramesh Kaushik

Digitally signed by Srishti Ramesh Kaushik
Date: 2024.10.30 16:10:34 +05'30'

**Srishti Ramesh Kaushik**
**Company Secretary and Compliance officer**

## ನೆಕ್ಕಂಟಿ ನಾಗರಾಜ್ ಜಾಮೀನು ವಜಾ

**ಬೆಂಗಳೂರು:** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ 95 ಕೋಟಿ ಹಣ ವರ್ಗಾಯಿಸಿರುವ ಪ್ರಕರಣದಲ್ಲಿ ಮಾಜಿ ಸಚಿವ ಬಿ ನಾಗೇಂದ್ರ ಆಪ್ತ ಸಹಾಯಕ ನೆಕ್ಕಂಟಿ ನಾಗರಾಜ್ ಸೇರಿ ನಾಲ್ವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ವಜಾ ಮಾಡಿದೆ.

ಪ್ರಕರಣದಲ್ಲಿ 6ನೇ ಆರೋಪಿ ನೆಕ್ಕಂಟಿ ನಾಗರಾಜ್, 8ನೇ ಆರೋಪಿ ಬಿ ವಿಜಯ ಕುಮಾರ್ ಗೌಡ, 23ನೇ ಆರೋಪಿ ಬಿ. ರಮೇಶ್ ಅಲಿಯಾಸ್ ಎನ್. ರಮೇಶ್ ಮತ್ತು 25ನೇ ಆರೋಪಿ ಎಡರ ರುದ್ರಯ್ಯ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ತಿರಸ್ಕರಿಸಿದ್ದಾರೆ. ಜಾರಿ ನಿರ್ದೇಶನಾಲಯವು ನಾಗೇಂದ್ರ, ಸೇರಿ ಹಲವರ ವಿರುದ್ಧ ಅಕ್ರಮ ಹಣ ವರ್ಗಾವಣೆ ಕಾಯಿದೆ ಸೆಕ್ಷನ್ 3 ಮತ್ತು 4ರ ಅಡಿ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸುತ್ತಿದೆ. 25 ಆರೋಪಿಗಳ ವಿರುದ್ಧ ಜಾರಿ ನಿರ್ದೇಶನಾಲಯವು 4,970 ಪುಟಗಳ ಆರೋಪ ಪಟ್ಟಿ ಹಾಗೂ 144 ಪುಟಗಳ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

## ಕೌಶಲ್ಯಾಧಾರಿತ ಉದ್ಯೋಗ ಸೃಷ್ಟಿಗೆ ಮೋದಿ ಒತ್ತು

**ಬೆಂಗಳೂರು:** ಕೌಶಲ್ಯಾಧಾರಿತ ಉದ್ಯೋಗ ಸೃಷ್ಟಿಗೆ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರಕಾರ ಹೆಚ್ಚು ಒತ್ತು ನೀಡುತ್ತಿದ್ದು, ಕಳೆದ ಬಜೆಟ್ ಯುವಜನರಲ್ಲಿ ಕುಶಲತೆ ವೃದ್ಧಿಸುವ ನಿಟ್ಟಿನಲ್ಲಿ 3 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ಮೀಸಲಿಡಲಾಗಿದೆ ಎಂದು ಕೇಂದ್ರದ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಬೆಂಗಳೂರು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಸರಕಾರದ ಹನ್ನೆರಡು ಇಲಾಖೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

**PUBLIC NOTICE**

Public are informed that, my client Mohammed Shaukath Ali is the absolute owner of All that piece and parcel of property bearing No. Site Nos. 21, 22 & 23, formed out of Khatha No. 61, situated at Bommanahalli Village, Begur Hobli, Bangalore South Taluk, BBMP, Ward No. 189, Hongasandra, measuring East to West 42+42/2 feet and North to South 50+53.5/2 feet and bounded on the : East by: Road, West by: Private Property, North by: Private Property, South by: Site no. 20. and informing general public that Mohammed Shaukath Ali intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

KSR Associates
ADVOCATES & LEGAL CONSULTANTS, OFFICE # 53/1, 1st Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com, Mob: 99450 00789

ವಾದ–ಪ್ರತಿವಾದ ಆಲಿಸಿ ತೀರ್ಪು ಕಾಯ್ದಿರಿಸಿದ ಹೈಕೋರ್ಟ್ | ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್

# ದರ್ಶನ್ ಮಧ್ಯಂತರ ಜಾಮೀನು ಆದೇಶ ಇಂದು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಅವರ ಮಧ್ಯಂತರ ಜಾಮೀನು ಅರ್ಜಿಯ ಆದೇಶವನ್ನು ಇಂದು (ಬುಧವಾರ) ಪ್ರಕಟಿಸುವುದಾಗಿ ಹೈಕೋರ್ಟ್ ತಿಳಿಸಿದೆ.

ಸೋಮವಾರ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರಿದ್ದ ನ್ಯಾಯಪೀಠ, ಸರಕಾರ ಮತ್ತು ಅರ್ಜಿದಾರರ ಪರ ವಕೀಲರ ವಾದ–ಪ್ರತಿವಾದ ಆಲಿಸಿ ಆದೇಶ ಕಾಯ್ದಿರಿಸಿತು. ವಿಚಾರಣೆ ವೇಳೆ ದರ್ಶನ್ ಪರ ವಾದ ಮಂಡಿಸಿದ ವಕೀಲರು, ಜೈಲಿನ ಅಧಿಕಾರಿಗಳು ನೀಡಿರುವ ವರದಿಯನ್ನು ಪೀಠಕ್ಕೆ ವಿವರಿಸಿ, ದರ್ಶನ್ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಬಳ್ಳಾರಿಯಲ್ಲಿ ಅವರಿಗೆ ಚಿಕಿತ್ಸೆ ಕೊಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕೇ ಎಂಬ ಬಗ್ಗೆ ಅನುಮತಿ ಪಡೆದುಕೊಳ್ಳಬೇಕಾದ ಅಗತ್ಯವಿಲ್ಲ ಎಂದರು.

**ಚಿಕಿತ್ಸೆ ಪಡೆಯಲು ಮುಕ್ತ ಅವಕಾಶ:** ತನ್ನ ವೆಚ್ಚದಲ್ಲಿ ತನಗೆ ನಂಬಿಕೆ ಹೊಂದಿರುವ ವೈದ್ಯರಿಂದ ಚಿಕಿತ್ಸೆ ಪಡೆಯುವುದಕ್ಕೆ ಮುಕ್ತ ಅವಕಾಶವಿದೆ. ಸರಕಾರದ ವೆಚ್ಚದಲ್ಲಿ ಅಲ್ಲ. ಇಂತಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂಬ ಅಂಶವನ್ನು ಪ್ರಾಸಿಕ್ಯೂಷನ್(ತನಿಖಾಧಿಕಾರಿಗಳು) ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ. ವೈದ್ಯರ ಸೂಚನೆಯಂತೆ ಚಿಕಿತ್ಸೆಗೆ ಒಳಗಾಗದಿದ್ದಲ್ಲಿ ಮುಂದೆ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಅಲ್ಲದೆ, ಪ್ರಕರಣ ಸಂಬಂಧ ತನಿಖೆ ಪೂರ್ಣಗೊಂಡಿದ್ದು ಆರೋಪಪಟ್ಟಿಯನ್ನೂ ಸಲ್ಲಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಅರ್ಜಿದಾರರು ರೆಗ್ಯೂಲರ್ ಜಾಮೀನು ಕೇಳುತ್ತಿಲ್ಲ. ಸಾಮಾನ್ಯ ಜಾಮೀನು ಕೋರಿರುವ ಅರ್ಜಿ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ. ಪ್ರಸ್ತುತ ಆರೋಗ್ಯದ ದೃಷ್ಟಿಯಿಂದ ಮಧ್ಯಂತರ ಜಾಮೀನು ಕೋರುತ್ತಿದ್ದೇವೆ. ಈ ರೀತಿಯ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಕೊಲೆ ಆರೋಪಿಯಾಗಿದ್ದರೂ, ಮ್ಯಾಜಿಸ್ಟ್ರೇಟ್ ನ್ಯಾಯಾಲಯವೂ ಜಾಮೀನು ಮಂಜೂರು ಮಾಡಬಹುದು. ಹೀಗಾಗಿ ಮಧ್ಯಂತರ ಜಾಮೀನು ನೀಡಬೇಕೆಂದು ಕೋರಿದರು. ಅರ್ಜಿದಾರರಿಗೆ ಈ ಹಿಂದೆಯೂ ಸಮಸ್ಯೆ ಇದ್ದು, ಇದೀಗ ಸಮಸ್ಯೆ ಉಲ್ಬಣಗೊಂಡಿದೆ ಶಸ್ತ್ರಚಿಕಿತ್ಸೆ ಅತ್ಯಗತ್ಯ ಎಂದು ತಿಳಿಸಿದರು.

### ಅರ್ಜಿದಾರರಿಗೆ ತಕ್ಷಣ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ

ಇದಕ್ಕೆ ಆಕ್ಷೇಪಿಸಿದ ಸರಕಾರಿ ವಿಶೇಷ ಅಭಿಯೋಜಕ ಪಿ.ಪ್ರಸನ್ನಕುಮಾರ್, ಅರ್ಜಿದಾರರಿಗೆ ತಕ್ಷಣ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ ಎಂದು ವೈದ್ಯರು ವರದಿಯಲ್ಲಿ ತಿಳಿಸಲಾಗಿದೆ. ಅಲ್ಲದೆ, ಅರ್ಜಿದಾರರ ಆರೋಗ್ಯ ಸಂಬಂಧ ವರದಿ ನೀಡಿರುವುದು ಸರಿಯೇ. ಆದರೆ, ಅವರ ಆರೋಗ್ಯಕ್ಕೆ ಮತ್ತೊಂದು ಪರೀಕ್ಷೆ ಸಂಬಂಧ ಅರ್ಜಿದಾರರನ್ನು ಬೆಂಗಳೂರಿಗೆ ಕರೆತಂದು, ವಿಕ್ಟೋರಿಯಾ ಇಲ್ಲವೇ ಬೌರಿಂಗ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಕೆ ಶಿಫಾರಸು ಮಾಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪೀಠ, ಯಾವುದೇ ವ್ಯಕ್ತಿ ಒಮ್ಮೆ ಆರೋಗ್ಯ ಕಳೆದುಕೊಂಡರೆ ಅದನ್ನು ಜೀವನದಲ್ಲಿ ಸರಿಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆರೋಗ್ಯ ಮತ್ತಷ್ಟು ಕೆಡಬೇಕು ಎಂಬುದಾಗಿ ಪ್ರಾಸಿಕ್ಯೂಷನ್ ನಿರೀಕ್ಷೆ ಮಾಡುವುದೇ ಎಂದು ಪ್ರಶ್ನಿಸಿತು.

ವಾದ ಮುಂದುವರಿಸಿದ ದರ್ಶನ್ ಪರ ವಕೀಲರು, ಅರ್ಜಿದಾರರು ಆಸ್ಪತ್ರೆಗೆ ದಾಖಲಾದ ಬಳಿಕ ಅವರ ಸಮಸ್ಯೆಗಳ ಕುರಿತು ವೈದ್ಯರು ತಿಳಿಸುವ ವಿವರ ಗೊತ್ತಾಗಲಿದೆ. ಜತೆಗೆ, ಷರತ್ತುಗಳನ್ನು ವಿಧಿಸಿ ಮೂರು ತಿಂಗಳವರೆಗೂ ಮಧ್ಯಂತರ ಜಾಮೀನು ಮಂಜೂರು ಮಾಡಬೇಕು ಎಂದು ಪೀಠಕ್ಕೆ ಕೋರಿದರು.

## ಟಾಕ್ಸಿಕ್ ಸಿನಿಮಾ ತಂಡ ವಿರುದ್ಧ ಕ್ರಮಕ್ಕೆ ಸೂಚನೆ

**ಬೆಂಗಳೂರು:** ನಗರದ ಎಚ್‌ಎಂಟಿ ಪ್ಲಾಂಟೇಷನ್‌ನಲ್ಲಿ ಮರ ಕಡಿದ ಪ್ರಕರಣ ಸಂಬಂಧ ಯಶ್ ಅಭಿನಯದ ಟಾಕ್ಸಿಕ್ ಸಿನಿಮಾ ತಂಡದ ವಿರುದ್ಧ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ, ಅವರು ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಹಿಂದೂಸ್ತಾನ್ ಮಷಿನ್ ಟೂಲ್ಸ್ (ಎಚ್‌ಎಂಟಿ) ವತಿಯಿಂದ ಕೆನರಾ ಬ್ಯಾಂಕ್‌ಗೆ ಮಾರಾಟ ಮಾಡಲಾಗಿದೆ ಎನ್ನಲಾದ ಅರಣ್ಯ ಭೂಮಿಯಲ್ಲಿ ಟಾಕ್ಸಿಕ್ ಸಿನಿಮಾದ ಸೆಟ್ ಹಾಕುವುದಕ್ಕೆ ಅನುಮತಿ ನೀಡಲಾಗಿತ್ತು. ಆದರೆ, ಈ ಅರಣ್ಯ ಭೂಮಿಯಲ್ಲಿದ್ದ ಮರಗಳ ನಾಶವನ್ನು ಟಾಕ್ಸಿಕ್ ಸಿನಿಮಾ ತಂಡವು ಸೆಟ್ ಹಾಕುವುದಕ್ಕಾಗಿ ಕಡಿದು ಹಾಕಿತ್ತು. ಈ ಹಿನ್ನೆಲೆಯಲ್ಲಿ ಪೀಣ್ಯದ ಎಚ್‌ಎಂಟಿ ಪ್ಲಾಂಟೇಷನ್‌ನಲ್ಲಿ ಮರ ಕಡಿದ ಆರೋಪಕ್ಕೆ ಟಾಕ್ಸಿಕ್ ಚಿತ್ರತಂಡ ಗುರಿಯಾಗಿದೆ.

ಹಲವು ದಿನಗಳಿಂದ ಪೀಣ್ಯದ ಬಳಿಯ ಎಚ್‌ಎಂಟಿ ಪ್ಲಾಂಟೇಷನ್‌ನಲ್ಲಿ ಸೆಟ್ ಹಾಕಿಕೊಂಡು ಚಿತ್ರೀಕರಣ ಆರಂಭಿಸಿದ್ದ ಟಾಕ್ಸಿಕ್ ಸಿನಿಮಾ ತಂಡವು, ನಿಯಮಾನುಸಾರ ಅನುಮತಿಯನ್ನು ಪಡೆದುಕೊಳ್ಳದೇ ಬೇಕಾಬಿಟ್ಟಿಯಾಗಿ ಮರಗಳನ್ನು ಕಡಿದು ಹಾಕಿದೆ. ಇದು ಅರಣ್ಯ ಇಲಾಖೆಯ ನಿಯಮಾನುಸಾರ ಅಪರಾಧವಾಗಿದೆ. ಅದರಲ್ಲೂ ಅರಣ್ಯ ಭೂಮಿಯಲ್ಲಿ ಮರ ಕಡಿಯುವುದು ದಂಡನೀಯ ಅಪರಾಧವಾಗಿದೆ. ಈ ಹಿನ್ನೆಲೆಯಲ್ಲಿ ಸಚಿವ ಈಶ್ವರ್ ಖಂಡ್ರೆ ಅವರು ಟಾಕ್ಸಿಕ್ ಸಿನಿಮಾ ತಂಡದಿಂದ ಮರ ಕಡಿದಿರುವ ಬಗ್ಗೆ ಸ್ಯಾಟ್‌ಲೈಟ್ ಇಮೇಜ್ ಪಡೆದುಕೊಂಡಿದ್ದಾರೆ. ಇಲ್ಲಿ ಎಷ್ಟು ಮರ ಕಡಿಯಲಾಗಿದೆ? ಇದಕ್ಕೆ ನಿಯಮಾನುಸಾರ ಅನುಮತಿ ಪಡೆಯಲಾಗಿದೆಯೇ.? ಅನುಮತಿ ಕೊಟ್ಟಿದ್ದರೆ, ಅರಣ್ಯ ಭೂಮಿಯಲ್ಲಿ ಮರ ಕಡಿತಲೆಗೆ ಅನುಮತಿ ನೀಡಿದ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸೂಚನೆ ನೀಡಿದ್ದಾರೆ. ಇನ್ನು ಅನುಮತಿ ಇಲ್ಲದೆ ಮರ ಕಡಿತಲೆ ಮಾಡಿದ್ದಲ್ಲಿ ಅದಕ್ಕೆ ಕಾರಣರಾದ ಎಲ್ಲರ ವಿರುದ್ಧ ಕ್ರಮಕ್ಕೆ ಸೂಚನೆ ನೀಡಿದ್ದಾರೆ. ಹಾಗಾಗಿ, ಸಚಿವ ಈಶ್ವರ್ ಖಂಡ್ರೆ ಅರಣ್ಯ ಅಪರಾಧ ಪ್ರಕರಣ ದಾಖಲಿಸಲು ಸೂಚಿಸಿದ್ದಾರೆ.


### ಸೆಟ್ ಪರಿಶೀಲಿಸಿದ ಸಚಿವ ಖಂಡ್ರೆ

ಇದರ ಬೆನ್ನಲ್ಲಿಯೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಿನಿಮಾ ಸೆಟ್ ನಿರ್ಮಾಣಕ್ಕೆ ಮರಗಳ ಮಾರಣಹೋಮ ಮಾಡಿರುವ ಸಿನಿಮಾ ತಂಡದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಖಡಕ್ ವಾರ್ನಿಂಗ್ ನೀಡಿದ್ದಾರೆ. ಇಲ್ಲಿ ಯಾರೇ ತಪ್ಪು ಮಾಡಿದ್ದರೂ ಅವರ ವಿರುದ್ಧ ಅರಣ್ಯ ಇಲಾಖೆ ಕಾನೂನಿನ ಅನ್ವಯ ಕ್ರಮ ಆಗುತ್ತದೆ ಎಂದು ಎಚ್ಚರಿಕೆಯನ್ನು ರವಾನಿಸಿದ್ದಾರೆ.

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್
ಜಾಸ್ತಿ ಕ್ಲಾಸ್

ಭೂಕಬಳಿಕೆ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ಜಾರಿ ಮಾಡಿದ್ದ ಸಮನ್ಸ್

## ಚಲುವರಾಯಸ್ವಾಮಿ ವಿರುದ್ಧದ ಸಮನ್ಸ್‌ಗೆ ಹೈ ತಡೆ



**ಬೆಂಗಳೂರು:** ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧದ ಭೂಕಬಳಿಕೆ ಆರೋಪದಲ್ಲಿ ವಿಶೇಷ ನ್ಯಾಯಾಲಯ ಜಾರಿ ಮಾಡಿರುವ ಸಮನ್ಸ್ ಮತ್ತು ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ಹಾಗೂ ಪ್ರಕರಣ ರದ್ದುಪಡಿಸುವಂತೆ ಕೋರಿ ಸಚಿವ ಚಲುವರಾಯಸ್ವಾಮಿ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, 2024ರ ಮಾ.28 ರಂದು ಭೂ ಕಬಳಿಕೆ ಕುರಿತಾದ ವಿಶೇಷ ಕೋರ್ಟ್ ಹೊರಡಿಸಿದ್ದ ಸಮನ್ಸ್‌ಗೆ ಹಾಗೂ ಮುಂದಿನ ವಿಚಾರಣಾ ಪ್ರಕ್ರಿಯೆಗಳಿಗೆ ತಡೆ ನೀಡಿ ವಿಚಾರಣೆಯನ್ನು 2025ರ ಜನವರಿಗೆ ಮುಂದೂಡಿತು.

**ಒತ್ತುವರಿ ಪ್ರಶ್ನೆ ಇಲ್ಲ :** ಅರ್ಜಿದಾರರ ಪರ ವಾದಿಸಿದ ವಕೀಲ ಸಿದ್ದಾರ್ಥ್ ಮುಚ್ಚಂಡಿ, ಭೂಮಿ 1923ರಿಂದಲೂ ಅಸ್ತಿತ್ವದಲ್ಲಿದ್ದು, ಅದನ್ನು ಮೂಲ ಮಾಲೀಕರು ದೇವಾಲಯಕ್ಕೆ ಗಿಫ್ಟ್ ಡೀಡ್ ಮಾಡಿದ್ದರು. ಆನಂತರ ಆ ಜಮೀನನ್ನು ಸರಕಾರ 1982ರಲ್ಲಿ ತಿಮ್ಮರಾಯಪ್ಪ ಅವರಿಗೆ ಮಂಜೂರು ಮಾಡಿದೆ. ಅವರ ಕಡೆಯಿಂದ ಅರ್ಜಿದಾರರು ಖರೀದಿ ಮಾಡಿದ್ದಾರೆ. ಹಾಗಾಗಿ ಇದರಲ್ಲಿ ಒತ್ತುವರಿ ಪ್ರಶ್ನೆಯೇ ಬರುವುದಿಲ್ಲ ಎಂದರು. ಅಲ್ಲದೆ, ಕಳೆದ ನೂರು ವರ್ಷಗಳ ದಾಖಲೆಗಳಲ್ಲಿ ಆ ಭೂಮಿ ಕರಾಬು ಅಥವಾ ಕೆರೆ ಪ್ರದೇಶ ಎಂದು ಎಲ್ಲೂ ಉಲ್ಲೇಖವಾಗಿಲ್ಲ. ಇದೀಗ ಏಕಾಏಕಿ ಸರ್ವೆ ಮಾಡಿ ಅದು ಕೆರೆಯ ಜಾಗ ಎಂದು ಹೇಳಲಾಗುತ್ತಿದೆ. ಆದರೆ ಅದಕ್ಕೆ ಯಾವುದೇ ದಾಖಲೆಗಳಿಲ್ಲ ಎಂದು ವಾದಿಸಿದರು.

ಜತೆಗೆ, ಮಂಜೂರಾದ ಭೂಮಿಯನ್ನು ಸರಕಾರ ರದ್ದುಗೊಳಿಸಿಲ್ಲ, ಮಂಜೂರಾತಿ ಹಾಗೆಯೇ ಇದೆ. ಆದ್ದರಿಂದ ಒತ್ತುವರಿ ಪ್ರಶ್ನೆ ಉದ್ಭವಿಸುವುದಿಲ್ಲ.

ಹೀಗಾಗಿ ಈ ಪ್ರಕರಣದಲ್ಲಿ ಕರ್ನಾಟಕ ಭೂಕಬಳಿಕೆ ನಿಷೇಧ ಕಾಯಿದೆ ಅನ್ವಯಿಸಿರುವುದೇ ಕಾನೂನುಬಾಹಿರ ಕ್ರಮವಾಗಿದೆ. ಆದ್ದರಿಂದ ವಿಚಾರಣೆ ಮತ್ತು ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ರದ್ದುಗೊಳಿಸಬೇಕು ಎಂದು ನ್ಯಾಯಾಲಯವನ್ನು ಕೋರಿದ್ದರು.

**ಪ್ರಕರಣದ ಹಿನ್ನೆಲೆ:** 1923ರಲ್ಲಿ ದಾಸನಪುರ ಹೋಬಳಿಯ ಮಾಕಳಿ ಗ್ರಾಮದ ಸರ್ವೆ ನಂಬರ್ 13ರಲ್ಲಿದ್ದ 3ಎಕರೆ 13 ಗುಂಟೆ ಭೂಮಿಯನ್ನು ಮೂಲ ಮಾಲೀಕರಾದ ಗೌಡಯ್ಯ ಆಂಜನೇಯ ದೇವಾಲಯಕ್ಕೆ ಕೊಡುಗಡೆಯಾಗಿ ಕೊಟ್ಟಿದ್ದರು. 1982ರಲ್ಲಿ ದೇವಾಲಯದ ಹೆಸರಿನಲ್ಲಿ ಆ ಜಾಗ ನೋಂದಣಿ ಮಾಡಿಕೊಡುವಂತೆ ಭೂ ನ್ಯಾಯಮಂಡಳಿ ಆದೇಶ ನೀಡಿತ್ತು.

2023ರ ಸೆ.23ರಂದು ಕರ್ನಾಟಕ ಭೂಕಬಳಿಕೆ ವಿಶೇಷ ನ್ಯಾಯಾಲಯ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿ ಕೊಂಡು ಪರಿಶೀಲಿಸಿ ವರದಿ ನೀಡುವಂತೆ ತಹಸೀಲ್ದಾರ್‌ಗೆ ನಿರ್ದೇಶನ ನೀಡಿತ್ತು. ಆನಂತರ ಸರ್ವೆ ನಡೆಸಿ ಸುಮಾರು 9 ಗುಂಟೆ ಜಾಗವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ವರದಿ ಸಲ್ಲಿಸಲಾಗಿತ್ತು. ಅದನ್ನು ಆಧರಿಸಿ ವಿಶೇಷ ನ್ಯಾಯಾಲಯ ಅರ್ಜಿದಾರ ರಿಗೆ ಸಮನ್ಸ್ ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿ ಚಲುವರಾಯಸ್ವಾಮಿ ಹೈಕೋರ್ಟ್ ಮೆಟ್ಟಿಲೇರಿದ್ದರು.




ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯಲ್ಲಿ ಕೇಂದ್ರ ಆಯುರ್ವೇದ ಸಂಶೋಧನಾ ಸಂಸ್ಥೆಯ ಮುಖ್ಯಸ್ಥೆ ಡಾ. ಸುಲೋಚನಾ ಭಟ್, ಸಮತ್ವಮ್ ನ ಡಾ. ಶ್ರೀಕಂಠ ಮತ್ತು ಬೆಂಗಳೂರು ಇನ್ಸಿಟ್ಯೂಟ್ ಆಫ್ ಎಜುಕೇಶನ್ ರಿಸರ್ಚ್‌ನ ಡಾ. ಕೆ. ಎಸ್. ನಾಗಭೂಷಣ ಭಾಗವಹಿಸಿದ್ದರು.

## ಆಯುರ್ವೇದದ ಉತ್ಕೃಷ್ಟತೆಯ ಕೇಂದ್ರ ಆರಂಭ

**ಬೆಂಗಳೂರು:** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಆಯುಷ್ ಸಚಿವಾಲಯದ ಪ್ರಾಯೋಜಿತ ಮಧುಮೇಹಕ್ಕಾಗಿ ಆಯುರ್ವೇದದ ಉತ್ಕೃಷ್ಟತೆಯ ಕೇಂದ್ರ ಆರಂಭ ಮಾಡಲಾಗಿದೆ.

9ನೇ ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಯುಷ್ ಸಚಿವಾಲಯ ಪ್ರಾಯೋಜಿತವಾದ ಮಧುಮೇಹ ಮತ್ತು ಚಯಾಪಚಯ ರೋಗಗಳ ಆಯುರ್ವೇದ ಉತ್ಕೃಷ್ಟತೆಯ ಕೇಂದ್ರ ಉದ್ಘಾಟನೆ ಮಾಡಿದ್ದಾರೆ. 2016 ರಿಂದ ರಾಷ್ಟ್ರೀಯ ಆಯುರ್ವೇದ ದಿನವನ್ನು ಪ್ರತಿ ವರ್ಷ ಧನ್ವಂತರಿ ಜಯಂತಿಯಂದು ಆಚರಿಸಲಾಗುತ್ತದೆ. ಈ ವರ್ಷದ ಥೀಮ್ ವಿಶ್ವ ಆರೋಗ್ಯಕ್ಕಾಗಿ ಆಯುರ್ವೇದವಾಗಿದೆ. ಐಐಎಸ್ಸಿಯ ಡಾ. ನವಕಂತ ಭಟ್ ಈ ಆಯುರ್ವೇದ ಉತ್ಕೃಷ್ಟತೆಯ ಕೇಂದ್ರವು, ಅಲ್ಲಿಯ ಸ್ನಾತಕೋತ್ತರ ವೈದ್ಯಕೀಯ ಶಾಲೆ ಯಲ್ಲಿ ಸಮಗ್ರ ವೈದ್ಯಕೀಯ ಕಾರ್ಯಕ್ರಮ ವನ್ನು ಬಲಪಡಿಸುವ ಭವಿಷ್ಯದ ದೃಷ್ಟಿಕೋನ ವನ್ನು ಹೊಂದಿದೆ ಎಂದು ತಿಳಿಸಿದ್ದಾರೆ. ಈ ಸಂಶೋಧನೆಯಲ್ಲಿ ಕೇಂದ್ರ ಆಯುರ್ವೇದ ಸಂಶೋಧನಾ ಸಂಸ್ಥೆಯ ಮುಖ್ಯಸ್ಥೆ ಡಾ. ಸುಲೋಚನಾ ಭಟ್, ಸಮತ್ವಮ್‌ನ ಡಾ. ಶ್ರೀಕಂಠ ಮತ್ತು ಬೆಂಗಳೂರು ಇನ್ಸಿಟ್ಯೂಟ್ ಆಫ್ ಎಜುಕೇಶನ್ ರಿಸರ್ಚ್‌ನ ಡಾ. ಕೆ. ಎಸ್. ನಾಗಭೂಷಣ ಇದ್ದರು.

## ನಿಧಿಗಾಗಿ ಮಗನ ಬಲಿಗೆ ಯತ್ನ: ಪತಿ ವಿರುದ್ಧ ಪತ್ನಿ ದೂರು

**ಬೆಂಗಳೂರು:** ನಿಧಿಗಾಗಿ ಕುಟ್ಟಿ ಪೂಜೆ ಎಂಬ ಮಾಟಮಂತ್ರ ಮಾಡಲು ಮಗುವನ್ನು ಕೊಲ್ಲಲು ಮುಂದಾದ ಪತಿಯ ವಿರುದ್ಧ ಪತ್ನಿ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ.

ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ಹೆತ್ತ ಮಗನನ್ನೇ ಕೊಲೆಮಾಡಲು ಮುಂದಾಗಿದ್ದು, ಆತನ ವಿರುದ್ಧ ಕಿರುಕುಳ, ಜೀವ ಬೆದರಿಕೆ ಮತ್ತು ಮತಾಂತರಕ್ಕೆ ಯತ್ನಿಸಿದ್ದಾನೆ ಎಂದು ಪತ್ನಿ ವನಜಾಕ್ಷಿ ದೂರು ನೀಡಿದ್ದಾರೆ. ಪತಿಯ ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ವಿರುದ್ಧ ಕೆಆರ್ ಪುರ ಠಾಣೆ ಪೊಲೀಸರು ದೂರು ದಾಖಲಿಸಿಕೊಳ್ಳಲು ಹಿಂಜರಿದಿದ್ದಾರೆ ಎಂದು ವನಜಾಕ್ಷಿ ಆರೋಪಿಸಿದ್ದಾರೆ.

**ಸಂತ್ರಸ್ತೆಯ ವಿವರಣೆ:** 2020ರಲ್ಲಿ ಬ್ಲೂಡಾಟ್‌ನಲ್ಲಿ ಉದ್ಯೋಗಿ ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ಪರಿಚಯವಾಗಿದ್ದು, ಸದ್ದಾಂ ಹುಸೇನ್, ನಾನು ನಿನ್ನನ್ನು ಮದುವೆ ಆಗುತ್ತೇನೆ ಎಂದು ಹಿಂದೆ ಬಿದ್ದಿದ್ದ. ಬಳಿಕ, ನಾವಿಬ್ಬರೂ ಹಿಂದೂ ಸಂಪ್ರದಾಯದಂತೆ ವಿವಾಹವಾದೆವು. ನಂತರ, ನವೆಂಬರ್ 2020ರಲ್ಲಿ ಮುಸ್ಲಿಂ ಸಂಪ್ರದಾಯದಂತೆ ಮದುವೆಯಾಗುವಂತೆ ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ಒತ್ತಾಯಿಸಿದ.

ಬಳಿಕ, ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ನನ್ನನ್ನು ಅಜ್ಞಾತಸ್ಥಳಕ್ಕೆ ಕರೆದೊಯ್ದ. ಅಲ್ಲಿ ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ಮತ್ತು ಆತನ ಸಹಚರನಾದ ನಯಾಜ್, ಇಸ್ಲಾಂ ಧರ್ಮಕ್ಕೆ ಮತಾಂತರವಾಗುವಂತೆ ನನಗೆ ಒತ್ತಾಯಿಸಿದರು. ಅಲ್ಲಿ ನನಗೆ ಸಾದಿಯಾ ಕೌಸರ್ ಎಂದು ಮರು ನಾಮಕರಣ ಮಾಡಿದರು. ಮುಸ್ಲಿಂ ವಿವಾಹ ಪ್ರಮಾಣಪತ್ರಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿಹಾಕುವಂತೆ ಅವರು ನನಗೆ ಒತ್ತಡ ಹೇರಿದರು. ಇದಾದ ಬಳಿಕ ಗರ್ಭಿಣಿಯಾದ ನನ್ನ ಮೇಲೆ ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ನಿರಂತರವಾಗಿ ಹಲ್ಲೆ ಮಾಡಿದ. ಅಲ್ಲದೇ ನನ್ನ ತಾಯಿಗೂ ಜೀವ ಬೆದರಿಕೆ ಹಾಕಿದ. 2021ರ ಜುಲೈ 15 ನಾನು ಗಂಡು ಮಗುವಿಗೆ ಜನ್ಮ ನೀಡಿದೆ. ಮಗನಿಗೆ ಕರಣ್ ರಾಜ್ ಎಂದು ನಾಮಕರಣ ಮಾಡಿದೆ ಎಂದು ವನಜಾಕ್ಷಿ ವಿವರಿಸಿದ್ದಾಳೆ

ಸದ್ದಾಂ ಹುಸೇನ್ ಅಲಿಯಾಸ್ ಈಶ್ವರ್ ನಿಧಿಗಾಗಿ 'ಕುಟ್ಟಿ ಪೂಜೆ' ಎಂಬ ಮಾಟಮಂತ್ರ ಮಾಡಲು ತಯಾರಿ ನಡೆಸಿದ್ದ. ಈ ಮಾಟ–ಮಂತ್ರಕ್ಕೆ ಮಗನನ್ನು ಬಲಿಕೊಡುವುದಾಗಿ ಹೇಳಿದ. ಸದ್ದಾಂ ಮಾಟಮಂತ್ರ ಮಾಡುವುದನ್ನು ಕಲಿತಿದ್ದು, ಕೇರಳದವರ ಜತೆಗೂಡಿ ಮಾಟಮಂತ್ರ ಮಾಡುತ್ತಿದ್ದ. ಅಲ್ಲದೇ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನನ್ನ ತಾಯಿಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ. ಬಳಿಕ, ಇದೇ ವರ್ಷ ಅಕ್ಟೋಬರ್ 13 ರಂದು ಸದ್ದಾಂ ಹುಸೇನ್ ಮತ್ತು ಆತನ ಸಹಚರನಾದ ನಯಾಜ್ ತುಮಕೂರಿನ ನನ್ನ ನಿವಾಸದ ಬಳಿ ಬಂದು, ನನ್ನ ಮಗನನ್ನು ಅಪಹರಿಸಲು ಯತ್ನಿಸಿದರು. ಆದರೆ, ಪಕ್ಕದಲ್ಲಿದ್ದ ಮನೆಯವರ ಸಹಾಯದಿಂದ ನಾನು ಮತ್ತು ನನ್ನ ಮಗ ತಪ್ಪಿಸಿಕೊಂಡಿದ್ದೇವೆ. ಈ ಘಟನೆಯ ನಂತರ ನಾನು ಭಯಗೊಂಡು, ತಲೆಮರೆಸಿಕೊಂಡಿದ್ದೇನೆ.

## 2.36 ಕೋಟಿ ರು. ಮಾದಕ ವಸ್ತು ಜಪ್ತಿ

**ಬೆಂಗಳೂರು:** ಡ್ರಗ್ಸ್ ಸರಬರಾಜು, ಮಾರಾಟ, ಸೇವನೆ ವಿರುದ್ಧ ಸಮರ ಸಾರಿರುವ ಸಿಸಿಬಿ ಪೊಲೀಸರು ನೈಜೀರಿಯಾ ಡ್ರಗ್ ಪೆಡ್ಲರ್ ನನ್ನು ಬಂಧಿಸಿ 2.36 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ನೈಜರಿಯನ್ ಪ್ರಜೆ ಡ್ರಗ್ ಪೆಡ್ಲರ್ ಬೋನಿ ಫೇಸ್(31) ಬಂಧಿತ ಆರೋಪಿ. ಆತನಿಂದ 2.36 ಕೋಟಿ ಮೌಲ್ಯದ 1 ಕೆಜಿ 577 ಗ್ರಾಂ ತೂಕದ ಎಂಡಿಎಂಎ ಕ್ರಿಸ್ಟಲ್, ಮೊಬೈಲ್, ಎಲೆಕ್ಟ್ರಾನಿಕ್ ತೂಕದ ಯಂತ್ರ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಕಳೆದ ಅ.24 ರಂದು ಪರಪ್ಪನ ಅಗ್ರಹಾರದ ಶ್ರೀನಿಧಿ ಲೇಔಟ್, ದೊಡ್ಡ ನಾಗಮಂಗಲದ ಮನೆಯೊಂದರಲ್ಲಿ ವಾಸವಿದ್ದ ಖಚಿತವಾದ ಮಾಹಿತಿಯನ್ನು ಆಧರಿಸಿ ಕಾರ್ಯಾಚರಣೆ ಕೈಗೊಂಡು ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಬಂಧಿತ ವಿದೇಶಿ ನೈಜೀರಿಯಾ ಪ್ರಜೆ 2020ರ ಜನವರಿಯಲ್ಲಿ ಮೆಡಿಕಲ್ ವೀಸಾದಲ್ಲಿ ಭಾರತಕ್ಕೆ ಬಂದು ದೆಹಲಿ ಬಳಿಯ ಗ್ರೇಟರ್ ನೋಯ್ಡಾದಲ್ಲಿ ವಾಸವಾಗಿದ್ದ ಕ್ಷೌರಿಕ ಕೆಲಸ ಮಾಡಿಕೊಂಡಿರುತ್ತಾನೆ. ಈ ಆರೋಪಿಗೆ, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಓರ್ವ ವಿದೇಶಿ ಮೂಲದ ಮಹಿಳಾ ಡ್ರಗ್ ಪೆಡ್ಲರ್ ಜತೆ ಸಂಪರ್ಕವಿದ್ದು, ಆಕೆಯಿಂದ ನಿಷೇದಿತ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್ ಅನ್ನು ಪಡೆದು, ಆಕೆಯು ತಿಳಿಸುವ ಗಿರಾಕಿಗಳಿಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುತ್ತಿರುವುದನ್ನು ವಿಚಾರಣೆಯಲ್ಲಿ ಬಾಯ್ಬಿಟ್ಟಿದ್ದಾನೆ ಎಂದರು.

**INDEGENE LIMITED**
*(formerly Indegene Private Limited)*
CIN No. U73100KA1998PLC102040
**Regd Office:** Aspen Block G4, 3rd Floor, Manyata Embassy Business Park, Outer Ring Road, Nagawara, Bengaluru - 560 045

**EXTRACT OF UNAUDITED CONSOLIDATED FINANCIAL RESULTS FOR THE QUARTER AND SIX MONTHS ENDED 30 SEPTEMBER 2024**

(All amounts in ₹ millions, except per share data)

| Sl. No. | Particulars | Quarter ended | Six months ended | Quarter ended |
|---|---|---|---|---|
| | | 30 September 2024 | 30 September 2024 | 30 September 2023 |
| | | Unaudited | Unaudited | Unaudited |
| 1 | Revenue from operations | 6,868 | 13,633 | 6,357 |
| 2 | Net profit for the period/year (before tax and exceptional items) | 1,241 | 2,437 | 1,006 |
| 3 | Net profit for the period/year before tax (after exceptional items) | 1,241 | 2,437 | 1,006 |
| 4 | Net profit for the period/year after tax (after exceptional items) | 917 | 1,794 | 750 |
| 5 | Total comprehensive income for the period/year | 1,023 | 1,892 | 836 |
| 6 | Equity share capital (Face value of ₹2 each) | 478 | 478 | 443 |
| 7 | Earnings per share (EPS) for the period/ year (face value of ₹2 each) (Not annualised for interim periods) | | | |
| | (a) Basic EPS | 3.84 | 7.63 | 3.38 |
| | (b) Diluted EPS | 3.80 | 7.56 | 3.36 |

**Notes:**
1. The above results have been reviewed by the Audit Committee and approved by the Board of Directors at its meeting held on 28 October 2024. The statutory auditors have performed a limited review of the Consolidated Financial Results for the quarter and six months ended 30 September 2024 and have issued an unmodified review report on the same.
2. The above Consolidated Financial Results of the Group have been prepared in accordance with Indian Accounting Standards ("Ind AS") 34 - Interim Financial Reporting, recognition and measurement principles of Indian Accounting Standards ("Ind AS") prescribed under Section 133 of the Companies Act, 2013, as amended, read with the relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015.
3. During the six months ended 30 September 2024, the Company has completed Initial Public Offer (IPO) of 40,766,550 equity shares of face value of ₹2 each at an issue price of ₹452 per share, comprising fresh issue of 16,833,818 shares aggregating to ₹7,600 and offer for sale of 23,932,732 shares by selling shareholders aggregating to ₹10,818. The Equity shares of the Company were listed on National Stock Exchange of India Limited (NSE) and BSE Limited (BSE) on 13 May 2024. The Company was not mandatorily required to prepare and publish results for the quarter and six months ended 30 September 2023 in accordance with the regulations.
4. Standalone Information:

(All amounts in ₹ millions, except per share data)

| Sl. No. | Particulars | Quarter ended | Six months ended | Quarter ended |
|---|---|---|---|---|
| | | 30 September 2024 | 30 September 2024 | 30 September 2023 |
| | | Unaudited | Unaudited | Unaudited |
| 1 | Revenue from operations | 2,817 | 5,403 | 2,605 |
| 2 | Profit before tax | 610 | 1,062 | 394 |
| 3 | Net profit for the period / year | 448 | 775 | 293 |
| 4 | Other comprehensive income / (loss) | (4) | 3 | 9 |
| 5 | Total comprehensive income for the period / year | 444 | 778 | 302 |

5. The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The detailed format of consolidated and standalone results of the Company are available on the National Stock Exchange of India Limited (URL: www.nseindia.com), the BSE Limited website (URL: www.bseindia.com) and on the Company's website (URL: www.indegene.com/investor-relations).

For and on behalf of the Board of Directors
INDEGENE LIMITED
(formerly INDEGENE PRIVATE LIMITED)
Manish Gupta
Chief Executive Officer and Executive Director

Bengaluru
28 October 2024

Adfactors 411

**ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್**
**ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ:** ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6,ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
**ವೆಬ್‌ಸೈಟ್:** www.sjsindia.com | **ಇ-ಮೇಲ್:** compliance@sjsindia.com | **ದೂರವಾಣಿ:** +91 80 6194 0777
CIN: L51909KA2005PLC036601

**30ನೇ ಸೆಪ್ಟಂಬರ್ 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಏಕೀಕೃತ ಲೆಕ್ಕಪರಿಶೋಧನೆಯಿಲ್ಲದ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರ**

(ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ ಮಿಲಿಯನ್‌ಗಳಲ್ಲಿ ರೂಪಾಯಿಗಳು)

| ಕ್ರಮ ಸಂಖ್ಯೆ. | ವಿವರಗಳು | ತ್ರೈಮಾಸಿಕ ಕೊನೆಗೊಂಡಾಗ | | | ಅರ್ಧವರ್ಷ ಕೊನೆಗೊಂಡಾಗ | | ವರ್ಷ ಮುಗಿದಾಗ |
|---|---|---|---|---|---|---|---|
| | | 30.09.2024 | 30.06.2024 | 30.09.2023 | 30.09.2024 | 30.09.2023 | 31.03.2024 |
| | | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಪರಿಶೋಧಿಸಲಾಗಿದೆ |
| 1 | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 1927.88 | 1886.24 | 1631.78 | 3814.12 | 2804.26 | 6278.00 |
| 2 | ನಿವ್ವಳ ಲಾಭ ಅವಧಿಗೆ (ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚೆ) | 387.53 | 376.54 | 242.01 | 764.07 | 483.47 | 1,126.49 |
| 3 | ನಿವ್ವಳ ಲಾಭ ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ವಸ್ತುಗಳ ನಂತರ) | 387.53 | 376.54 | 242.01 | 764.07 | 483.47 | 1,126.49 |
| 4 | ತೆರಿಗೆಯ ನಂತರ ಹಾಗೂ ಅಪವಾದಾತ್ಮಕ (ಅಸಾಧಾರಣ) ಐಟಮ್‌ಗಳ ನಂತರದ ಅವಧಿಗಾಗಿ ನಿವ್ವಳ ಲಾಭ | 291.47 | 282.40 | 193.14 | 573.87 | 373.18 | 853.71 |
| 5 | ಅವಧಿಗೆ ಒಟ್ಟು ಸಮಗ್ರ ಆದಾಯ ಅವಧಿಯ ಲಾಭ [(ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)] | 286.25 | 276.66 | 189.63 | 562.91 | 366.02 | 868.75 |
| 6 | ಇಕ್ವಿಟಿ ಶೇರ್ ಕ್ಯಾಪಿಟಲ್ ( ತಲಾ - ರೂ. 10/- ರ ಮುಖ ಬೆಲೆ) | 310.38 | 310.38 | 310.38 | 310.38 | 310.38 | 310.38 |
| 7 | ಇತರ ಇಕ್ವಿಟಿ | | | | | | |
| 8 | ಪ್ರತಿ ಶೇರ್‌ಗೆ ಗಳಿಕೆ ( ತಲಾ -ರೂ.10/- ರ) | ವಾರ್ಷಿಕಗೊಳಿಸಲಾಗಿಲ್ಲ | ವಾರ್ಷಿಕಗೊಳಿಸಲಾಗಿಲ್ಲ | ವಾರ್ಷಿಕಗೊಳಿಸಲಾಗಿಲ್ಲ | ವಾರ್ಷಿಕಗೊಳಿಸಲಾಗಿಲ್ಲ | ವಾರ್ಷಿಕಗೊಳಿಸಲಾಗಿಲ್ಲ | ವಾರ್ಷಿಕಗೊಳಿಸಲಾಗಿದೆ |
| | 1. ಬೇಸಿಕ್ (ರೂ.) | 9.34 | 8.97 | 6.23 | 18.31 | 12.13 | 27.45 |
| | 2. ಡೈಲ್ಯೂಟೆಡ್ (ರೂ.) | 9.06 | 8.76 | 6.09 | 17.81 | 11.90 | 26.87 |

**ಟಿಪ್ಪಣಿಗಳು**
1. ಕಂಪನಿಯ ಪ್ರಮುಖ ಸ್ವತಂತ್ರ ಹಣಕಾಸು ಮಾಹಿತಿಯನ್ನು ಕೆಳಗೆ ನೀಡಲಾಗಿದೆ:

(ಮಿಲಿಯನ್‌ಗಳಲ್ಲಿ ರೂಪಾಯಿಗಳು)

| ಕ್ರಮ ಸಂಖ್ಯೆ. | ವಿವರಗಳು | ತ್ರೈಮಾಸಿಕ ಕೊನೆಗೊಂಡಾಗ | | | ಅರ್ಧವರ್ಷ ಕೊನೆಗೊಂಡಾಗ | | ವರ್ಷ ಮುಗಿದಾಗ |
|---|---|---|---|---|---|---|---|
| | | 30.09.2024 | 30.06.2024 | 30.09.2023 | 30.09.2024 | 30.09.2023 | 31.03.2024 |
| | | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಲೆಕ್ಕಪರಿಶೋಧನೆ ಮಾಡದ | ಪರಿಶೋಧಿಸಲಾಗಿದೆ |
| 1 | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 1,055.53 | 967.62 | 871.20 | 2,023.15 | 1,700.50 | 3,633.61 |
| 2 | ತೆರಿಗೆಗೆ ಮುಂಚಿನ ಲಾಭ | 350.81 | 250.87 | 208.11 | 601.68 | 426.32 | 885.56 |
| 3 | ತೆರಿಗೆಯ ನಂತರದ ಲಾಭ | 277.08 | 187.42 | 163.58 | 464.50 | 326.41 | 675.59 |
| 4 | ಒಟ್ಟು ಸಮಗ್ರ ಆದಾಯ | 273.39 | 184.13 | 160.42 | 457.52 | 320.58 | 691.60 |

2. 30 ಸೆಪ್ಟೆಂಬರ್ 2024ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಅರ್ಧವರ್ಷದ ಸಲುವಾಗಿ ಪರಿಷ್ಕರಿಸಿರದ ಈ ಮೇಲಿನ ಸಂಯೋಜಿತ ಮತ್ತು ಸ್ವತಂತ್ರ ಆರ್ಥಿಕ ಫಲಿತಾಂಶಗಳು ಆಡಿಟ್ ಕಮಿಟಿಯಿಂದ ಪುನರಾವಲೋಕನೆ ಮಾಡಲ್ಪಟ್ಟಿದೆ ಮತ್ತು ಆ ಬಳಿಕ ನಿರ್ದೇಶಕರ ಮಂಡಳಿಯಿಂದ 28 ಅಕ್ಟೋಬರ್ 2024ರಂದು ಜರಗಿದ ಅವರ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.
3. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ಪರಿಶೋಧಿಸಿರದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳ ಸಾರ ಮೇಲೆ ನೀಡಲಾಗಿದೆ. ವಿವರವಾದ ಲೆಕ್ಕಪರಿಶೋಧನೆಯಿಲ್ಲದ ತ್ರೈಮಾಸಿಕ ಹಣಕಾಸು ಫಲಿತಾಂಶಗಳು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ವೆಬ್‌ಸೈಟ್ www.nseindia.com ನಲ್ಲಿ ಮತ್ತು ಕಂಪೆನಿಯ ವೆಬ್‌ಸೈಟ್ www.sjsindia.com ನಲ್ಲಿಯೂ ಲಭ್ಯವಿದೆ.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಕೆ ಎ ಜೋಸೆಫ್
ಮ್ಯಾನೇಜಿಂಗ್ ಡೈರೆಕ್ಟರ್
ಡಿನ್: 00784084

ಸ್ಥಳ: ಬೆಂಗಳೂರು
ದಿನಾಂಕ: 28 ಅಕ್ಟೋಬರ್ 2024

CONCEPT